# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 158(191) |
| 2) ಸದಸ್ಯರ ಹೆಸರು | : | ಶ್ರೀ ಎಂ.ನಾರಾಯಣಸ್ವಾಮಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3) ಉತ್ತರಿಸುವ ದಿನಾಂಕ | : | 11.07.2018 |
| 4) ಉತ್ತರಿಸುವವರು | : | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಅಕ್ರಮ ವಿದ್ಯುತ್ ಸಂಪರ್ಕ, ಬೇಟೆಗಾರಿಕೆ, ವಾಹನಗಳ ಅಪಘಾತದಿಂದ ಹಾಗೂ ರೈಲಿಗೆ ಸಿಲುಕಿ ಕಾಡು ಪ್ರಾಣಿಗಳು ಬಲಿಯಾಗುತ್ತಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| (ಆ) | ಬಂದಿದ್ದಲ್ಲಿ, 2015-16ನೇ ಸಾಲಿನಿಂದ ಪ್ರಸ್ತುತ ದಿನಗಳವರೆಗೆ ರಾಜ್ಯಾದಾದ್ಯಂತ ಅಕ್ರಮ ವಿದ್ಯುತ್ ಸಂಪರ್ಕ, ಬೇಟೆಗಾರಿಕೆ, ವಾಹನಗಳ ಅಪಘಾತದಿಂದ ಹಾಗೂ ರೈಲಿಗೆ ಸಿಲುಕಿ ಮೃತಪಟ್ಟಿರುವ ಕಾಡು ಪ್ರಾಣಿಗಳ ಸಂಖ್ಯೆ ಎಷ್ಟು; ಅವು ಯಾವುವು; | ವಿದ್ಯುತ್‌ಸ್ಪರ್ಶ, ಬೇಟೆಗಾರಿಕೆ, ವಾಹನ ಅಪಘಾತ ಮತ್ತು ರೈಲು ಅಪಘಾತಗಳಿಂದ ಮೃತಪಟ್ಟ ವನ್ಯಪ್ರಾಣಿಗಳ ವಿವರಗಳು ಕೆಳಕಂಡಂತಿವೆ:- |

**2015-16:**

| ವನ್ಯಪ್ರಾಣಿ | ವಿದ್ಯುತ್ ಸ್ಪರ್ಶ | ಬೇಟೆ | ವಾಹನ ಅಪಘಾತ | ರೈಲ್ವೆ ಅಪಘಾತ |
|---|---|---|---|---|
| ಆನೆ | 08 | 03 | – | – |
| ಜಿಂಕೆ | – | – | 04 | – |
| ಕಾಡೆಮ್ಮೆ | – | – | 01 | 05 |
| ಸಾಂಬಾರ್ (ದೊಡ್ಡ ತಳಿಯ ಜಿಂಕೆ) | – | 02 | 01 | – |
| ಚಿರತೆ | – | – | 04 | – |

**2016-17:**

| ವನ್ಯಪ್ರಾಣಿ | ವಿದ್ಯುತ್ ಸ್ಪರ್ಶ | ಬೇಟೆ | ವಾಹನ ಅಪಘಾತ | ರೈಲ್ವೆ ಅಪಘಾತ |
|---|---|---|---|---|
| ಆನೆ | 05 | – | – | – |
| ಜಿಂಕೆ | – | 01 | 02 | – |
| ಕಾಡೆಮ್ಮೆ | 06 | – | – | 02 |
| ಸಾಂಬಾರ್ | – | – | 04 | – |
| ಚಿರತೆ | – | – | 02 | – |

**2017-18:**

| ವನ್ಯಪ್ರಾಣಿ | ವಿದ್ಯುತ್ ಸ್ಪರ್ಶ | ಬೇಟೆ | ವಾಹನ ಅಪಘಾತ | ರೈಲ್ವೆ ಅಪಘಾತ |
|---|---|---|---|---|
| ಆನೆ | 10 | – | – | 01 |
| ಜಿಂಕೆ | – | – | 01 | – |
| ಕಾಡೆಮ್ಮೆ | – | – | 01 | – |
| ಸಾಂಬಾರ್ | 01 | – | 01 | – |
| ಕರಡಿ | – | – | 01 | 01 |
| ಚಿರತೆ | 01 | – | 02 | – |

(ಇ) ಅಕ್ರಮ ವಿದ್ಯುತ್ ಸಂಪರ್ಕ, ಬೇಟೆಗಾರಿಕೆ, ವಾಹನಗಳ ಅಪಘಾತದಿಂದ ಹಾಗೂ ರೈಲಿಗೆ ಸಿಲುಕುತ್ತಿರುವ ಕಾಡು ಪ್ರಾಣಿಗಳನ್ನು ರಕ್ಷಿಸಲು ಸರ್ಕಾರ ಅನುಸರಿಸುತ್ತಿರುವ ಮಾರ್ಗಸೂಚಿಗಳೇನು;

(ಈ) ಈ ಅಪಘಾತಗಳಿಂದ ಕಾಡುಪ್ರಾಣಿಗಳನ್ನು ರಕ್ಷಿಸಲು ಸರ್ಕಾರ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳೇನು?

1) ಅಕ್ರಮ ವಿದ್ಯುತ್ ಸಂಪರ್ಕದಿಂದ ಉಂಟಾಗುವ ವನ್ಯಪ್ರಾಣಿ ಸಾವು ಪ್ರಕರಣಗಳಲ್ಲಿ ಸಂಬಂಧಿಸಿದ ಆರೋಪಿಗಳ ವಿರುದ್ಧ ವನ್ಯಜೀವಿ (ಸಂರಕ್ಷಣಾ) ಕಾಯ್ದೆ 1972ರ ಪ್ರಕಾರ ಪ್ರಕರಣ ದಾಖಲು ಮಾಡಲಾಗುತ್ತಿದೆ.

2) ವನ್ಯಪ್ರಾಣಿಗಳನ್ನು ಬೇಟೆಯಾಡುವುದು ವನ್ಯಜೀವಿ (ಸಂರಕ್ಷಣಾ) ಕಾಯ್ದೆ 1972ರ ಪ್ರಕಾರ ಉಲ್ಲಂಘನೆಯಾಗಿದ್ದು, ಅಂತಹವರ ವಿರುದ್ಧ ನಿಯಮಾನುಸಾರ ಮೊಕದ್ದಮೆ ದಾಖಲು ಮಾಡಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲು ಕ್ರಮ ಕೈಗೊಳ್ಳಲಾಗುವುದು.

3) ವಾಹನಗಳ ಅಪಘಾತದಿಂದ ಉಂಟಾಗುವ ವನ್ಯಪ್ರಾಣಿಗಳ ಸಾವು ತಪ್ಪಿಸಲು ಮೈಸೂರು–ಮಾನಂತವಾಡಿ ರಸ್ತೆ ಮತ್ತು ಮೈಸೂರು–ಸುಲ್ತಾನ್‌ಬತೇರಿ ರಸ್ತೆಗಳಲ್ಲಿ ರಾತ್ರಿ ಸಂಚಾರವನ್ನು ನಿಷೇಧಿಸಲಾಗಿದೆ. ಅಲ್ಲದೆ ವನ್ಯಪ್ರಾಣಿಗಳು ಓಡಾಡುವ ಪ್ರದೇಶಗಳಲ್ಲಿ ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ ಹಾಗೂ ವೇಗದ ಮಿತಿ ಕಡಿಮೆಗೊಳಿಸುವ ಸಲುವಾಗಿ ಅಲ್ಲಲ್ಲಿ ರಸ್ತೆ ಉಬ್ಬುಗಳನ್ನು ಅಳವಡಿಸಲಾಗಿದೆ.

4) ಖಾನಾಪುರ–ಲೋಂಡಾ ಮತ್ತು ಸಕಲೇಶಪುರ–ಸುಬ್ರಮಣ್ಯ ರೈಲು ಮಾರ್ಗಗಳಲ್ಲಿ ಮಾತ್ರ ಕಾಡಾನೆಗಳು ರೈಲು ಅಪಘಾತದಿಂದ ಸಾವನ್ನಪ್ಪುತ್ತಿರುವ ಪ್ರಕರಣಗಳು ದಾಖಲಾಗಿವೆ. ಬೆಳಗಾವಿ ಜಿಲ್ಲೆ ವ್ಯಾಪ್ತಿಯಲ್ಲಿ ರೈಲು ಅಪಘಾತದಿಂದ ಆನೆಗಳು ಸಾವಿಗೀಡಾಗುತ್ತಿರುವ ಪ್ರಕರಣಗಳನ್ನು ತಪ್ಪಿಸಲು ನೈರುತ್ಯ ರೈಲ್ವೆ, ಹುಬ್ಬಳ್ಳಿ ರವರಿಗೆ ದಿನಾಂಕ: 22.01.2018ರಲ್ಲಿ ಪತ್ರ ಬರೆದು ಆನೆಗಳು ಓಡಾಡುವ ಪ್ರದೇಶಗಳ ವ್ಯಾಪ್ತಿಯಲ್ಲಿ ಕೆಳಸೇತುವೆ ಮೂಲಕ ರೈಲುಗಳ ಸಂಚಾರಕ್ಕೆ ವ್ಯವಸ್ಥೆ ಮಾಡಲು

| | | |
|---|---|---|
| | | ಕೋರಲಾಗಿತ್ತು. ಈ ಬಗ್ಗೆ ರೈಲ್ವೆ ಇಲಾಖೆಯು ದಿನಾಂಕ: 29.05.2018ರ ಪತ್ರದಲ್ಲಿ ಅಂಡರ್‌ಪಾಸ್ / ಓವರ್‌ಪಾಸ್ ನಿರ್ಮಿಸುವ ಮತ್ತು ಫೆನ್ಸಿಂಗ್ ಮಾಡಬಹುದಾದ ಸೂಕ್ಷ್ಮ ಸ್ಥಳಗಳನ್ನು ಗುರುತಿಸಿ ತಿಳಿಸಿದಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ. ಅದರಂತೆ ಸ್ಥಳ ಪರಿಶೀಲಿಸಿ ಹೆಚ್ಚು ರೈಲ್ವೆ ಅಪಘಾತ ಸಂಭವಿಸುವ ರೈಲ್ವೆ ಮಾರ್ಗಗಳನ್ನು ಗುರುತಿಸುವ ಹಾಗೂ ಕೈಗೊಳ್ಳಬೇಕಾದ ಕ್ರಮದ ಕುರಿತು ವರದಿ ನೀಡಲು ಆನೆ ತಜ್ಞರನ್ನು ಕೋರಲಾಗಿದೆ. |

ಸಂಖ್ಯೆ: ಅಪಜೀ 119 ಎಫ್‌ಡಬ್ಲ್ಯೂಎಲ್ 2018

(ಆರ್. ಶಂಕರ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು